# ಬೀದಿಯ ಹಕ್ಕಿಗಳು

■ ರಹಮತ್ ತರೀಕೆರೆ



ಈಚೆಗೆ ಶಿವಮೊಗ್ಗೆಗೆ ಹೋದವನು ತಮ್ಮನ ಮನೆಯಲ್ಲಿ ಉಳಿದುಕೊಂಡಿದ್ದೆ. ಇನ್ನೂ ಚುಮುಚುಮು ಬೆಳಕು ಹರಿಯುತಲಿತ್ತು. ಚಳಿ ಸುರಿಯುತಲಿತ್ತು. ಕೆಲಸವಿಲ್ಲದ ನಿರಾಳತೆಯಿಂದ ಹುಟ್ಟಿದ ಆಲಸ್ಯವನ್ನೇ ಹೊದ್ದುಕೊಂಡು ಬಿದ್ದಿದ್ದೆ; ವಾಕಿಂಗ್ ಹೋಗಬೇಕೆಂದು ರಾತ್ರಿ ಮಾಡಿದ ಸಂಕಲ್ಪವು ಮರೆತು ಹೋಗಿರಲು, ರಜಾಯಿಯ ಮುಸುಕಿನಲ್ಲಿ ಕಾಲುಗಳನ್ನು ಝಡ್ ಆಕಾರದಲ್ಲಿ ಕೊಕ್ಕೆ ಮಾಡಿಕೊಂಡು ಅಜಗರನಾಗಿದ್ದೆ. ನಿದ್ದೆಕೋಣೆಯ ಪಕ್ಕದ ಮರಗಳಿಂದ ಕೋಗಿಲೆಗಳು ನಾದಗಲಭೆ ಎಬ್ಬಿಸಿದ್ದವು. ಮನೆ ಮುಂದಿನ ವಿದ್ಯುತ್ತಾರಿನ ಮೇಲಿಂದ ಗಿಲಕಿ ಆಡಿಸಿದಂತೆ ಮಿಂಚುಳ್ಳಿಯ ಗಿಲಿಗಿಲಿಕ್, ನೆಲದ ಮೇಲಿನ ಹಸಿಮಣ್ಣ ಪರದೆಯ ಕೆದರಿ ಗೆದ್ದಲು ತಿನ್ನಲು ಬಂದಿರುವ ಮರಕುಟಿಗನ ಕುಟ್‌ಕುಟೀರ್, ಜೋಗುಳ ಪಾಡುತ್ತಿದ್ದವು. ಆದರೆ ಗುಡಿ ಚರ್ಚು ಮಸೀದಿಗಳಿಂದ ಹೊರಡುತ್ತಿದ್ದ ಕೂಗು ಮಾತ್ರ ಹೆಪ್ಪುನಿದ್ದೆಯನ್ನು ಕದಡುತ್ತಿತ್ತು. ಮಲಗಿದ ಜನರನ್ನು ಎಬ್ಬಿಸುವುದರಲ್ಲಿ ಈ ದೇವರುಗಳಿಗೆಂಥ ಆಸಕ್ತಿಯೊ? ಬಿಡುಗಣ್ಣರಾದ್ದರಿಂದ ಅವರಿಗಂತೂ ನಿದ್ದೆಯಿಲ್ಲ. ನರಮನುಷ್ಯರು ಚಣಕಾಲ ಸುಖನಿದ್ದೆ ಮಾಡುವುದಕ್ಕೂ ಬಿಡುವುದಿಲ್ಲ. ಇಷ್ಟಕ್ಕೂ ಸುಪ್ರಭಾತ ಕಟ್ಟಿ ಹಾಡಿ ಅವರನ್ನು ಎಬ್ಬಿಸುವವರು ನಾವು ತಾನೇ ಎಂದು ಅಡ್ಡತಿಡ್ಡ ಧೇನಿಸುತ್ತ ಶಯನಶಾಯಿಯಾಗಿದ್ದೆ.

ಈ ಅರೆಯೆಚ್ಚರದ ಗಳಿಗೆಯಲ್ಲಿ, ಬಗಲಿನ ಗಲ್ಲಿಯಿಂದೆಲ್ಲೊ 'ಮಂಡಕ್ಕೀ' ಎಂಬ ಸದ್ದು ಕರ್ಣಪಟಲವನ್ನು ತಾಡಿಸಿತು. ಅದು ಹಕ್ಕಿಗಳ ಇಂಚರದೊಟ್ಟಿಗೇ ಕಲಸಿಕೊಂಡು ಬರುತ್ತಿತ್ತು. ಇಪ್ಪತ್ತೈದು ವರುಷಗಳ ಹಿಂದೆ ಈ ಊರಲ್ಲಿದ್ದಾಗ ದಿನವೂ ಬೆಳಗಿನ ಸಿಹಿನಿದ್ದೆಯನ್ನು ನಿರ್ದಯವಾಗಿ ಕದಡುತ್ತಿದ್ದ ಅತಿಪರಿಚಿತ ಕರೆಯಲ್ಲವೇ ಇದು? ಸಿನಿಮಾ ನೋಡಿಯೊ ಪಾರ್ಟಿ ಮುಗಿಸಿಯೊ ಓದುಬರೆಹ ಮಾಡಿಯೊ ತಡರಾತ್ರಿ ಮಲಗಿ, ಆರಾಂ ಏಳಬೇಕೆಂದು ಮಲಗಿದ್ದ ದಿನ, ಕಿವಿಗೆ ಸಿಕ್ಕಿಸಿದ ಅಲಾರಮ್ಮಿನಂತೆ ಬಂದು ತಿವಿಯುತ್ತಿತ್ತು; ಹೆಂಚಿನ ಛಾವಣಿ ಮೂಲಕ ನುಗ್ಗುತ್ತಿದ್ದ ಇದು, ಸೋಮಾರಿ ಗಂಡನ್ನು ಎಬ್ಬಿಸಲು ಗೃಹಿಣಿಯರು ಮಾಡಿಸಿದ ಹುನ್ನಾರದಂತಿತ್ತು. ಒಮ್ಮೆ ಈ ಕೂಗುತ್ಪಾದಕಿಯನ್ನು ಹತ್ತಿರಕ್ಕೆ ಕರೆದು ಇಡೀ ಮೂಟೆಯನ್ನು ಖರೀದಿಸಿ, "ನಮ್ಮನೆ ಕಡೆ ಇನ್ನೊಂದು ತಿಂಗಳು ಸುಳೀಬೇಡ. ಕೂಗೋದಾದರೆ ಮೆತ್ತಗೆ ಕೂಗು. ಜನರ ನಿದ್ದೆ ಯಾಕೆ ಕೆಡಸ್ತೀಯಾ?" ಎಂದು ಬುದ್ಧಿ ಹೇಳಿದ್ದುಂಟು; ಅದಕ್ಕವಳು 'ಮೆತ್ತಗೆ ಕೂಗಿದರೆ ಒಳಗಿರೋರು ಹೊರಗ ಬರೋಲ್ಲಣ್ಣ. ಕೆಲವರ ಮನ್ಯಾಗೆ ಏಳುಗಂಟೆಗೇ ತಿಂಡಿ ರೆಡಿ ಆಗಬೇಕು. ನೀನ್ಯಾಕೆ ಲೇಟಾಗೇಳ್ತೀಯಾ? ಅಕ್ಕನಂಗೆ ಜಲ್ದಿ ಏಳು' ಎಂದು ತಿರುಗುಬಾಣ ಬಿಟ್ಟು, ತನ್ನ ಕೂಗುಸ್ವಾತಂತ್ರ್ಯವನ್ನು ಸ್ಥಾಪಿಸಿದ್ದಳು. ನನ್ನ ಮುನಿಸು ಕಳೆಯಲು 'ಈಗ ಭಟ್ಟಿಯಿಂದ ಹಾಕಿಸಿಕೊಂಡು ಬಂದಿದೀನಣ್ಣ. ತಿಂದುನೋಡು' ಎಂದು ಮುಷ್ಟಿ ಮಂಡಕ್ಕಿಯಿಂದ ನನ್ನ ಬೊಗಸೆ ತುಂಬಿದ್ದಳು. ಗುಮಾನಿಯಿಲ್ಲ. ಉಪ್ಪುಸವರಿದ ಅಕ್ಕಿಯಲ್ಲಿ ಮಾಡಿದ, ಬಾಯಲ್ಲೇ ಸಶಬ್ದವಾಗಿ ಕರಗುವ ಸಿಹಿಯಾದ ಮಂಡಕ್ಕಿ. ಆದರೆ ಕೂಗು ಮಾತ್ರ ಸೈರನ್ ಕೂಗಿದಂತೆ ಕಿವಿಕಠೋರ.

ಒಂದಾನೊಂದು ಕಾಲಕ್ಕೆ ಇಷ್ಟವಾಗದ ಈ ಕರೆ ಇಂದು ಸುಪ್ತ ನೆನಪನ್ನು ಬಡಿದೆಬ್ಬಿಸುತ್ತ ಹಿತವಾಗಿ ಕೇಳಿಸುತ್ತಿರುವುದು ಅಚ್ಚರಿಯೆನಿಸಿತು. ಕಾಲಕ್ಕೆ ಕರ್ಕಶವನ್ನು ಮಧುರವಾಗಿ ಪಳಗಿಸುವ ಯಾವುದೋ ಮಾಂತ್ರಿಕತೆ ಇದ್ದಂತಿದೆ. ಕಣ್ಣುಜ್ಜುತ್ತ ಬಂದು ಕಿಟಕಿ ಬಳಿ ನಿಂತೆ. ಕೂಗು ತಮ್ಮನ ಬೀದಿಗೆ, ಮನೆಯ ಹತ್ತಿರಕ್ಕೇ ಬಂತು. ನನಗೆ ಮಂಡಕ್ಕಿ ಕೊಳ್ಳುವ ಇರಾದೆಯೇನಿರಲಿಲ್ಲ. ಏಕಬಾರ್, ಅವಳನ್ನು ನೋಡಬೇಕಿತ್ತು. 'ಏ ಮಂಡಕ್ಕೀ' ಎಂದು ನಿಲ್ಲಿಸಿ, ಕೆಳಗಿಳಿದು ಹೋಗಿ ಹತ್ತು ರೂಪಾಯಿಯ ವ್ಯಾಪಾರ ಮಾಡಿದೆ. ಅದೇ ಉರಿದಕೊಳ್ಳಿಯಂಥ ಹೆಂಗಸು. ಬೂದಿಯಿಂದೆದ್ದು ಬಂದವಳೆಂಬಂತೆ ಮಸಿಸೀರೆ; ಎಲೆಯಡಿಕೆ ತಿಂದು ಕರಿಗಟ್ಟಿದ ದಂತಪಂಕ್ತಿ. ವಯಸ್ಸಾಗಿಯೋ ಮೂಟೆಹೊತ್ತೋ ಬೆನ್ನು ಮತ್ತಷ್ಟು ಬಾಗಿದೆ. ಬಿಸಿಲಲ್ಲಿ ತಿರುಗಿ ಭಟ್ಟಿ ಹೊಗೆ ಕುಡಿದು ಮೈಕೈ ಕಪ್ಪಾಗಿದೆ. ಆದರೆ ನನ್ನ ಸ್ಮೃತಿಕೋಶದ ಕವಾಟವನ್ನು ತೆಗೆದ ಅವಳ ಆಕೃತಿಗೂ ಮಧುರ ದನಿಗೂ ಕೃತಜ್ಞತೆ ಸಲ್ಲಿಸುತ್ತ (ಅವಳ ಹೆಸರೂ ನೆನಪಿರಲಿಲ್ಲ)– 'ಏನಮ್ಮಾ ಚೆನ್ನಾಗಿದ್ದೀಯಾ? ಹೊಸ್ಮನೆ ನಾಕನೇ ಕ್ರಾಸಿನಾಗ ಹಂಚಿನ ಮನ್ಯಾಗೆ ಇದ್ದಿವಿ ನೋಡು. ಭಾಳ ಗಿಡ ಸಾಕಿದ್ವಿ, ಜೋರಾಗಿ ಕೂಗಬೇಡ ಅಂತ ಜಗಳ ಮಾಡ್ತಿದ್ದೆ, ನೆಪ್ಪಿದೆಯಾ?' ಎಂದೆ. ಆಕೆ ಶೂನ್ಯದತ್ತ ದಿಟ್ಟಿಹರಿಸಿ ನೆನಪಿನ ತಿಪ್ಪೆಯನ್ನು ಕೆರೆದು ನಮ್ಮನೆಯ ಚಿತ್ರವನ್ನು ತೆಗೆಯಲು ಯತ್ನಿಸಿದಳು. ಅದು ಸಿಗಲಿಲ್ಲ. 'ಇರಬಹುದಣ್ಣಾ. ಭಾಳ ಬೀದಿ ತಿರಗ್ತೀನಿ. ನೆಪ್ಪಾಗವೊಲ್ಲದು. ನನಗೂ ಮುಪ್ಪಾತು' ಎಂದಳು. "ಯಾಕಮ್ಮ ಕುಂಟ್‌ತಿದೀಯ?" ಎಂದೆ. 'ಮೂಟೆ ಹೊತ್ಕೊಂಡು ಒಂದು ಸುಡುಗಾಡ ಮನೆ ಮಹಡಿ ಹತ್ತಿದ್ದೆನಣ್ಣ. ಮೆಟ್ಟಲು ಜಾರಿ ಬಿದ್ದೆ. ಮೂರು ತಿಂಗಳು ಸುಧಾರಿಸಿಕೊಂಡೆ. ಮನೆಯವರು ಆಸ್ಪತ್ರೆ ಖರ್ಚನ್ನಾದರೂ ಕೊಡಲಿಲ್ಲ' ಎಂದಳು. 'ಇನ್ನೂ ಊರಾಡಬೇಕು. ವರ್ತನೆಯವರಿಗೆ ಹಾಕಬೇಕು. ಬರ್ತೀನಣ್ಣ. ಮೂಟೆ ಹೊರಸು' ಎಂದು ಅವಸರಿಸಿದಳು. ಭಕ್ಷೀಸು ಕೊಡಲೇ?